ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ, ಬೆಳಗಾವಿ ಜಿಲ್ಲೆ

ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳ ಕಛೇರಿ, ಬೆಳಗಾವಿ

**Email: ddwobelagavi@gmail.com** ದೂರವಾಣಿ :0831-2476096

ಸಂ:ವಿಹಿನಾಸಇ/ಜಿಅಂಕಬೆ/ನ.ಮು.ಭಾ./ಸ.ಆ.ಕು/ಪ್ರ.ಸ್ವೀ.ಕು/2026-27/177. ದಿನಾಂಕ:16-06-2026

ಗೆ,

1) ಮಾನ್ಯ ಕುಲಸಚಿವರು
   ವಿಶ್ವೇಶ್ವರಯ್ಯಾ ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ.
2) ಮಾನ್ಯ ಕುಲಸಚಿವರು
   ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿ.
3) ಮಾನ್ಯ ಕುಲಸಚಿವರು
   ಕೆ.ಎಲ್.ಇ. ಮಹಾವಿದ್ಯಾಲಯ, ಬೆಳಗಾವಿ.
4) ನಿರ್ದೇಶಕರು,
   ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (ಬಿಮ್ಸ್) ಬೆಳಗಾವಿ.
5) ಉಪನಿರ್ದೇಶಕರು,
   ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ
   ಬೆಳಗಾವಿ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ.
6) ಉಪನಿರ್ದೇಶಕರು
   ಶಾಲಾ ಶಿಕ್ಷಣ ಇಲಾಖೆ
   ಬೆಳಗಾವಿ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ.
7) ಪ್ರಾಂಶುಪಾಲರು,
   ಕೇಂದ್ರೀಯ ವಿದ್ಯಾಲಯ ನಂ.1, 2 ಮತ್ತು 3
   ಬೆಳಗಾವಿ.
8) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
   ಬೆಳಗಾವಿ ಜಿಲ್ಲೆ.
9) ಉಪನಿರ್ದೇಶಕರು,
   ಕ್ರೀಡೆ ಮತ್ತು ಯುವಸಬಲೀಕರಣ ಇಲಾಖೆ, ಬೆಳಗಾವಿ.
10) ಜಿಲ್ಲಾ ಆಯುಷ್ ಅಧಿಕಾರಿಗಳು
   ಆಯುಷ್ ಇಲಾಖೆ, ಬೆಳಗಾವಿ.

ಮಾನ್ಯರೇ,

**ವಿಷಯ : "ನಶಾಮುಕ್ತ ಭಾರತ ಅಭಿಯಾನ" ಯೋಜನೆಯಡಿ ನಶಾಮುಕ್ತ ಭಾರತ ಅಭಿಯಾನ ಸಪ್ತಾಹ ಆಚರಿಸುವ ಕುರಿತು.**

**ಉಲ್ಲೇಖ :1) ಕೇಂದ್ರ ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ: DP-13011(6)/47/2023-DP-I-Part(1), ದಿನಾಂಕ: 10-06-2026.**
**2) ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹಿನಿ/ಜದಇ/ಸಿ3/03/2026-27, ದಿನಾಂಕ: 12-06-2026.**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿಗಳನ್ವಯ **"ನಶಾಮುಕ್ತ ಭಾರತ ಅಭಿಯಾನ"** ಯೋಜನೆಯಡಿ ದಿನಾಂಕ: 17-06-2026 ರಿಂದ 26-06-2026 ರ ವರೆಗೆ ಮಾದಕ ವಸ್ತು ಸೇವನೆಯ ದುಷ್ಪರಿಣಾಮಗಳ ಕುರಿತು ನಶಾಮುಕ್ತ ಭಾರತ ಅಭಿಯಾನ ಸಪ್ತಾಹ ಹಾಗೂ ದಿನಾಂಕ: 26-06-2026 ರಂದು ಅಂತರರಾಷ್ಟ್ರೀಯ ಮಾದಕ ವಸ್ತು ವ್ಯಸನ ನಿವಾರಣೆ ಮತ್ತು ನಿಯಂತ್ರಣ ದಿನಾಚರಣೆಯನ್ನು ಹಮ್ಮಿಕೊಳ್ಳಲು ಸೂಚಿಸಿದ್ದು, ಕೇಂದ್ರ ಸರ್ಕಾರದಿಂದ ಸೂಚಿತ ಕಾರ್ಯಕ್ರಮಗಳ ವೇಳಾಪಟ್ಟಿಯಂತೆ ಹಾಗೂ ಈ ಕೆಳಕಂಡ ಕಾರ್ಯಕ್ರಮಗಳನ್ನು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಹಮ್ಮಿಕೊಳ್ಳಲು ತಿಳಿಸಲಾಗಿರುತ್ತದೆ.

1) ಕಾಲೇಜು ಮತ್ತು ಅಂತರ್ ಕಾಲೇಜುಗಳ ಮಧ್ಯೆ ಸ್ಪರ್ಧೆಗಳು, ಸೆಮಿನಾರ್‌ಗಳು, ಕಾರ್ಯಾಗಾರಗಳು, ಮಾದಕ ದ್ರವ್ಯ ವಿರೋಧಿ ಮಾನವ ಸರಪಳಿ ರಚನೆ, ವಿದ್ಯಾರ್ಥಿಗಳ ಮತ್ತು ಜನಸಮೂಹದ ಜಾಥಾಗಳು, ಜಿಲ್ಲೆಗಳಲ್ಲಿ ಬೀದಿ ನಾಟಕಗಳು.
2) ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಾದ ಮ್ಯಾರಾಥಾನ್, ವಾಕ್‌ಥಾನ್, ಮಾದಕ ದ್ರವ್ಯ ಸೇವನೆ ವಿರುದ್ಧ ಓಟ, ಕ್ರೀಡಾ ಪಂದ್ಯಾವಳಿಗಳನ್ನು ಆಯೋಜಿಜಸುವುದು.
3) ಎಲ್ಲಾ ಶಾಲೆ / ಕಾಲೇಜುಗಳ ಆವರಣದಲ್ಲಿ ಸಸಿ ನೆಡುವುದು, ಅದನ್ನು ನಶಾ ಮುಕ್ತ ಭಾರತ ಅಭಿಯಾನಕ್ಕೆ ಅರ್ಪಿಸುವುದು.
4) ಎಲ್ಲಾ ವಿದ್ಯಾರ್ಥಿಗಳು, ಯುವತಿಯರು, ಉದ್ಯೋಗಿಗಳು ಮತ್ತು ಇತರರು ಜಾಲ ತಾಣ http://nmba.dosje.gov.in/content/take-a-pledge ಮೂಲಕ e-Pledge ತೆಗೆದುಕೊಂಡು ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡುವುದು.

ಈ ಎಲ್ಲಾ ಕಾರ್ಯಕ್ರಮಗಳನ್ನು NMBA ಮೋಬೈಲ್ ಆ್ಯಪ್‌ನಲ್ಲಿ ಕಡ್ಡಾಯವಾಗಿ On time ಅಪ್‌ಲೋಡ್ ಮಾಡಲು ತಿಳಿಸಲಾಗಿರುತ್ತದೆ.

ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ನಶಾಮುಕ್ತ ಭಾರತ ಅಭಿಯಾನ ಸಪ್ತಾಹದೊಂದಿಗೆ ಅಂತರರಾಷ್ಟ್ರೀಯ ಮಾದಕ ವಸ್ತು ವ್ಯಸನ ನಿವಾರಣೆ ಮತ್ತು ನಿಯಂತ್ರಣ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಲು ತಮ್ಮನ್ನು ಕೋರುತ್ತಾ, ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆ / ಕಾಲೇಜುಗಳ ಮುಖ್ಯಸ್ಥರಿಗೆ ಸೂಕ್ತ ನಿರ್ದೇಶನ ಮತ್ತು ಮಾರ್ಗದರ್ಶನ ನೀಡಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ನೋಡಲ್ ಅಧಿಕಾರಿಗಳಾದ ಶ್ರೀ ನಾಮದೇವ ಬೀಲ್ಕರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಬೆಳಗಾವಿ ಇವರನ್ನು ಮೊ.ಸಂ: 8050609098 ಗೆ ಅಥವಾ 9606520245 ಗೆ ಸಂಪರ್ಕಿಸಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

16/06/26

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
ಬೆಳಗಾವಿ.

ಲಗತ್ತು:
1) ಉಲ್ಲೇಖಿತ ಪತ್ರಗಳ ಪ್ರತಿ
2) ಕಾರ್ಯಕ್ರಮಗಳ ವೇಳಾ ಪಟ್ಟಿ.

ಪ್ರತಿಯನ್ನು :
1) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.